ಮಾಡಿ ಅವರ ಕಣ್ಣು, ಕಿವಿ, ಮೂಗು, ಎರಡೂ ಕೈಗಳನ್ನು, ಗುಪ್ತಾಂಗವನ್ನೂ ಕೊಯ್ದು ಅವನ ದೇಹವನ್ನು ಒಂದು ಮರಕ್ಕೆ ನೇತು ಹಾಕಿ ಪೊಲೀಸರಿಗೆ ಸುದ್ದಿ ತಿಳಿಸಿ ಅವಳು ತಾನಾಗಿ ಪೊಲೀಸರಿಗೆ ಶರಣಾದಳು.

ನಾರಾಯಣಿ ಅಂಜುತ್ತಂಜುತ್ತ ಕೇಳಿದಳು 'ಮುಂದೆನಾಯ್ತು?' ಎಂದು.

'ಎಲ್ಲಕ್ಕಿಂತ ಮಹತ್ವದ ಸೀನ್ ಇದು. ನೀನು ಚೆನ್ನಾಗಿ ನಿಭಾಯಿಸಬೇಕು. ನೀನು ಮಾತ್ರ ಈ ಪಾತ್ರ ಮಾಡಬಲ್ಲೆ. ನಟಿಯರಿಗಿಂತ ನೀನು ಚೆನ್ನಾಗಿ ಅಭಿನಯಿಸಬಹುದು.'

'ಯಾವ ಸೀನ್ ಅದು?' ನಾರಾಯಣಿಯ ಎದೆಬಡಿತ ಹೆಚ್ಚಾಯಿತು.

'ರಾಮೇಶ್ವರಿಯ ಮೇಲೆ ಸಾಮಾಹಿಕ ಅತ್ಯಾಚಾರವಾಗಿ ಅವಳನ್ನು ನಗ್ನಳನ್ನಾಗಿ ಮಾಡಿ ಊರಲ್ಲಿ ಮೆರವಣಿಗೆ ಮಾಡಿದ ದೃಶ್ಯವದು! ಮುಖ್ಯಪಾತ್ರ ಮಾಡುವ ನಟಿಯೂ ನಿನ್ನ ಮೈಕಟ್ಟಿನವಳೇ.'

'ಯಾಕೆ, ಅವಳಿಂದ ಈ ಸೀನು ಮಾಡಲಾಗುವುದಿಲ್ಲವೇ?'

'ಅದಕ್ಕಾಗಿಯೆ ನಿನ್ನನ್ನು ಕರ್‌ಕೊಂಡು ಬಂದಿದ್ದೀವಲ್ಲ. ನಿನ್ನ ಪೂರ್ತಿ ನಗ್ನದೇಹ, ಮಧ್ಯೆ ಮಧ್ಯೆ ಅವಳ ಮುಖ ತೋರಿಸುತ್ತೇವೆ. ನಿನ್ನ ಮುಖ ನಾವು ತೋರಿಸುವುದಿಲ್ಲ. ಈಗ ನೀನು ಬಟ್ಟೆ ಬಿಚ್ಚಿ, ಊರ ಮಂದಿಯ ಮುಂದೆ ನಡೆದರೆ ಸಾಕು.'

ನಾರಾಯಣಿಗೆ ಇದು ಭಯಂಕರವೆನಿಸಿತು. ಅದು ತನ್ನ ದೊಡ್ಡ ಅವಮಾನವೆಂದು ಭಾವಿಸಿದಳು. ಅವಳು ಹೇಳಿದಳು:

'ಅವಳಿಗೇ ಹೇಳಿ, ಇದೆಲ್ಲ ಅವಳೇ ಮಾಡಲಿ. ನಾನು ಮತ್ತೆ ಮಧ್ಯೆ ಬೇಡ. ನನ್ನಿಂದ ಇದು ಆಗಲಿಕ್ಕಿಲ್ಲ.'

ಡೈರೆಕ್ಟರು ಆ ಮುಖ್ಯ ನಟಿಗೆ ಬಾಯಿಗೆ ಬಂದಂತೆ ಬಯ್ದರು. 'ಆ ಹಲ್ಕಾ ಹೆಣ್ಣು ಮಗಳು ಮೊಣಕಾಲಿನ ಮೇಲೆ ಬಟ್ಟೆ ಎತ್ತಲು ತಯಾರಿಲ್ಲ. ಲಕ್ಷಗಟ್ಟಲೆ ದುಡ್ಡು ಮಾತ್ರ ಕೇಳ್ತಾಳೆ.'

ನಾರಾಯಣಿಯ ಕಣ್ಣಲ್ಲಿ ನೀರು ಬಂತು. ಅವಳು ಎದ್ದು 'ಇಷ್ಟೆಲ್ಲ ಜನರ ಮುಂದೆ ನಾನು ಪೂರ್ತಿ ಬಟ್ಟೆ ಬಿಚ್ಚುವುದು ಸಾಧ್ಯವಿಲ್ಲ' ಎಂದು ಮನೆಯ ಹಿಂಭಾಗಕ್ಕೆ ಹೋಗಿ ಮರದಡಿಗೆ ಕುಳಿತುಕೊಂಡಳು.

ಆಗ ಅವರೆಲ್ಲ ಅವಳ ಬಳಿ ಧಾವಿಸಿ ಬಂದರು. ಅವರು 'ನೀನು ಕರಾರು ಪತ್ರಕ್ಕೆ ಸಹಿ ಹಾಕಿದ್ದೀ. ಈಗಾಗಲೇ ಮುಂಗಡ ದುಡ್ಡು ಕೂಡ ಕೊಟ್ಟಿದ್ದೇವೆ. ಕರಾರಿನಂತೆ ಈಗ ಮಿಕ್ಕ ದುಡ್ಡೂ ಕೊಡ್ತೀವಿ. ನೀನು ಆಗುವುದಿಲ್ಲವೆಂದರೆ ಕೋರ್ಟು ಕಚೇರಿಗೆ ಹೋಗಬೇಕಾಗುತ್ತದೆ. ನೀನು ಪಡೆದ ಹಣ ವಾಪಸ್ ಕೊಟ್ಟು ಮೇಲಾಗಿ ದಂಡವನ್ನೂ ತೆರಬೇಕಾಗುತ್ತದೆ. ದಂಡ ತುಂಬದಿದ್ದರೆ ಜೈಲಿನ ಕಂಬಿ ಎಣಿಸಬೇಕಾಗುತ್ತದೆ.'

ಇನ್ನೊಬ್ಬ ಮಧ್ಯೆ ಬಾಯಿ ಹಾಕಿದ. 'ಸುಮ್ನೆ ಏಕೆ ರಗಳೆ ಮಾಡಿಕೊಳ್ತೀರಿ? ನಗರದ ಕೊಳಕು ಜನರ ಮುಂದೆ ಬಟ್ಟೆ ಬಿಚ್ತೀರಿ. ಅದು ನಿತ್ಯದ ಬಲಾತ್ಕಾರವಲ್ಲವೆ? ಇದರಲ್ಲಿ ಏನು ತಪ್ಪಿದೆ? ಫಿಲ್ಮಿನಲ್ಲಿ ನಿಮ್ಮ ಮುಖವಂತೂ ಕಾಣುವುದೇ ಇಲ್ಲ. ಎಲ್ಲವೂ ಆ ನಟಿಯ ಹೆಸರಿನಲ್ಲಿ. ನೀನು ಅಲ್ಲಿ ಬಟ್ಟೆ ಬಿಚ್ಚುವುದು ಈಗ ಇಲ್ಲಿ ಬಟ್ಟೆ ಬಿಚ್ಚುವುದರಲ್ಲಿ ಯಾವ ಮಹದಂತರವಿದೆ? ಎರಡೂ ಒಂದೇ.'

ನಾರಾಯಣಿಗೆ ಅಸಹ್ಯವೆನಿಸಿತು. ಅವಳು ಸಿಟ್ಟಿನ ಭರದಲ್ಲಿ 'ನಿಜಕ್ಕೂ ನಾವು ಅಲ್ಲಿ ಪೂರ್ತಿ ನಗ್ನರಾಗೋದಿಲ್ಲ. ನಾವು ನಿಮಗೆ ಅಲ್ಲಿ ಹೊಕ್ಕಳ ಹತ್ತಿರದ ಹಸಿದ ಹೊಟ್ಟೆಮಾತ್ರ ತೋರಿಸ್ತೇವೆ. ನಿಮ್ಮ ಕಣ್ಣಲ್ಲಿ ರಕ್ತ ಇಳಿದು ಬರುತ್ತದೆ. ನೀವು ಅಂಧರಾಗ್ತೀರಿ.'

'ಈಗಲೂ ನೀನು ಹಾಗೆಯೇ ಭಾವಿಸ್ಕೊ. ಇಲ್ಲಿ ಮಾತ್ರ ಬಿಡುಗಡೆಯಿಲ್ಲ ನೋಡು.'

ನಾರಾಯಣಿಗೆ ಈಗ ಎಚ್ಚರ ಬಂದಂತಾಯಿತು. ಅವಳು ವ್ಯಾವಹಾರಿಕವಾಗಿ ಯೋಚಿಸಿದಳು. ಇದುವರೆಗೆ ಎಷ್ಟು ಮಂದಿಯಿಂದ ದೇಹ ಕೊಚ್ಚಿಸಿಕೊಂಡದ್ದಾಯಿತು. ಕೆಲವರು ಅವಳ ಸೀರೆ, ಕುಪ್ಪುಸ